ಮಾಡುತ್ತಾರೆ. ಅದು ಕೇಂದ್ರವಲ್ಲ ಸ್ವಾಮಿ. ಸಬ್ಸಿಡಿಯನ್ನು ಯಾರು ಫಿಕ್ಸ್ ಮಾಡುವುದು?

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ.

ಶ್ರೀ ಎಸ್.ಎ. ರವೀಂದ್ರನಾಥ್: ಪರಿಶೀಲನೆ ಮಾಡಿ ಅದನ್ನು ಸರಿ ಮಾಡುವಂತಹ ಕೆಲಸವನ್ನು ಮಾಡುತ್ತೇನೆ.

ಅಧ್ಯಕ್ಷರು: ಆಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

2 (ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೆ, ದಿನಾಂಕ: 4.3.2011ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 63 ಪ್ರಶ್ನೆಗಳ ಪೈಕಿ 58 ಪ್ರಶ್ನೆಗಳ ಉತ್ತರಗಳನ್ನು ಹಾಗೂ ದಿನಾಂಕ: 25.2.2011ರ 1ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 31 ಪ್ರಶ್ನೆಗಳ ಪೈಕಿ 28 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಈಗ ಶೂನ್ಯವೇಳೆ ಶ್ರೀಮತಿ ಮಲ್ಲಿಕಾ ಪ್ರಸಾದ್‌ರವರೆ, ತಾವು ಮಾತನಾಡಿ.

(ಅನುಬಂಧ – 1 ಹಾಗೂ ಅನುಬಂಧ – 2)

3. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು:

(ಅ) ವಿಷಯ: ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ವೈದ್ಯರುಗಳಿಗೆ ಆಗಿರುವ ತೊಂದರೆಯ ಬಗ್ಗೆ.

ಶ್ರೀಮತಿ ಮಲ್ಲಿಕಾ ಪ್ರಸಾದ್ (ಪುತ್ತೂರು): ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ವೈದ್ಯರುಗಳಿಗೆ ಈಗಿನ ದಿನದಲ್ಲಿ ಆಗಿರುವಂತಹ ತೊಂದರೆಗಳನ್ನು ನಾನು ತಮ್ಮ ಮುಂದೆ ಹೇಳಲು ಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ಕ್ಲಿನಿಕ್‌ಗಳಲ್ಲಿ ಪುರುಷ ಹಾಗೂ ಮಹಿಳೆಯರಿಗೆ

ಪ್ರತ್ಯೇಕ ಶೌಚಾಲಯವನ್ನು ಕಡ್ಡಾಯವಾಗಿ ನಿರ್ಮಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಆದೇಶಿಸಿದ್ದು ಇದನ್ನು ಪಾಲಿಸದೆ ಇರುವ ಕ್ಲಿನಿಕ್‌ಗಳಿಗೆ ನೋಂದಾವಣೆಯನ್ನು ನೀಡುತ್ತಿಲ್ಲ. ಈ ಕಾನೂನಿನಿಂದಾಗಿ ಸಣ್ಣ ಪ್ರಮಾಣದ ಕ್ಲಿನಿಕ್‌ಗಳನ್ನು ಇಟ್ಟುಕೊಂಡಿರುವಂತಹ ವೈದ್ಯರುಗಳಿಗೆ ತುಂಬಾ ತೊಂದರೆಯಾಗಿದೆ. ಅಷ್ಟು ಮಾತ್ರವಲ್ಲ, ಈ ಒಂದು ತೊಂದರೆಯಿಂದಾಗಿ ಅವರ ಕ್ಲಿನಿಕ್ ಅನ್ನು ಮುಂದುವರಿಸುವುದಕ್ಕೆ ಸಾಧ್ಯವಿಲ್ಲದಿರುವಂತಹ ಪರಿಸ್ಥಿತಿಯನ್ನು ಅವರು ನಿರ್ಮಿಸಿಕೊಂಡಿದ್ದಾರೆ. ಅಂದರೆ ಅವರದೇ ಆದಂತಹ ಕ್ಲಿನಿಕ್‌ಗಳಲ್ಲಿ ಬೇರೆಯೊಂದು ಶೌಚಾಲಯವನ್ನು ಮಾಡುವುದಕ್ಕೆ ಸ್ಥಳದ ಅವಕಾಶವಿಲ್ಲ. ಅವರು ಬಾಡಿಗೆ ಕಟ್ಟಡದಲ್ಲಿ ಇರುವಂತಹ ಸಂದರ್ಭದಲ್ಲಿ ಅದು ಕೂಡ ಸಾಧ್ಯವಾಗುವುದಿಲ್ಲ. Private ಆಗಿ ಅವರದೇ ಒಂದು ಕಟ್ಟಡದಲ್ಲಿದ್ದರೂ ಕೂಡ ಸುಮಾರು 10 ರಿಂದ 20 ವರ್ಷ ಗಳಿಂದಲೂ ಕೂಡ ಅವರು ಕ್ಲಿನಿಕ್‌ನ್ನು ರನ್ ಮಾಡುತ್ತಾ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದಾರೆ. ಜನರಿಗೆ ಶೌಚಾಲಯದ ಸೌಕರ್ಯವನ್ನು ಮಾಡುವುದರಲ್ಲಿ ಅವರಿಗೆ ತುಂಬಾ ಕಷ್ಟವಾಗಿದೆ. ಈ ರೀತಿಯ ಕಾನೂನನ್ನು ಕಡ್ಡಾಯವಾಗಿ ಮಾಡಿದರೆ ಅವರು ಮುಂದಿನ ದಿನಗಳಲ್ಲಿ ನಿರುದ್ಯೋಗಿಗಳಾಗಬಹುದು. ಅವರು ಕ್ಲಿನಿಕ್ ಅನ್ನು ಮುಚ್ಚುವಂತಹ ಸಂದರ್ಭ ಬರಬಹುದು. ಅದನ್ನು ದಯವಿಟ್ಟು ಈ ಒಂದು ಕಾನೂನನ್ನು ಆದಷ್ಟು ಸಡಿಲಿಸಿ ಕಡ್ಡಾಯವಾಗಿ ಮಾಡದೆ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಕಾನೂನನ್ನು ಕಡ್ಡಾಯವಾಗಿ ಮಾಡಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ಅನೇಕ ಜನರು practitionersಗಳು ನಿರುದ್ಯೋಗಿಗಳಾಗಿದ್ದಾರೆ. ಇದರಿಂದ ಈ ಸಮಸ್ಯೆಗಳು ಮುಂದೆ ಜಾಸ್ತಿಯಾಗುತ್ತದೆ. ಅಷ್ಟು ಮಾತ್ರವಲ್ಲ, ಅದೆಷ್ಟೋ ರೋಗಿಗಳು ಅವರನ್ನೇ ನಂಬಿರುವಂತಹ ಜನರು ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗುವಂತಹ ಸಂದರ್ಭ ಉಂಟು. ಆದ್ದರಿಂದ ದಯವಿಟ್ಟು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತೊಮ್ಮೆ ಮನವಿಯನ್ನು ಮಾಡುತ್ತೇನೆ. ಈ ಒಂದು ಕಾನೂನನ್ನು ಆದಷ್ಟು

ಬೇಗ ಕಡ್ಡಾಯವಾಗಿ ಮಾಡದೆ ಕಾನೂನನ್ನು ಸಡಿಲಿಸಿ ಆ ಒಂದು ಕಾನೂನನ್ನು ಸದ್ಯಕ್ಕೆ ತರುವಂತಹ ಆ ಒಂದು ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು.

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ ಅಧಿನಿಯಮ 2007 ದಿನಾಂಕ: 13.8.2007ರಂದು ಘನತೆವೆತ್ತ ರಾಜ್ಯಪಾಲರು ಅನುಮೋದನೆ ದೊರೆಕಿದ್ದು ಅದನ್ನು ದಿನಾಂಕ: 16.8.2007 ಕರ್ನಾಟಕ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿ ವೈದ್ಯಕೀಯ ಕ್ಲಿನಿಕ್‌ಗಳಲ್ಲಿ ಕಡ್ಡಾಯವಾಗಿ ಪುರುಷರು ಮತ್ತು ಮಹಿಳೆಯರ ಶೌಚಾಲಯವನ್ನು ಪ್ರತ್ಯೇಕವಾಗಿ ತೆರೆಯುವಂತೆ ಸರ್ಕಾರದ ಆದೇಶವನ್ನು ಕರ್ನಾಟಕ ಸರ್ಕಾರವು ಕಡ್ಡಾಯವಾಗಿ ಮಾಡಬೇಕೆಂದು ವಿಧಾನಸಭಾ ಸದಸ್ಯರಾದಂತಹ ಶ್ರೀಮತಿ ಮಲ್ಲಿಕಾ ಪ್ರಸಾದ್‌ರವರು ಕೋರಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಉತ್ತಮ ಗುಣಮಟ್ಟದ ಆರೋಗ್ಯ ನೀಡಲೆಂದು ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೂ ಒದಗಿಸಬೇಕೆಂದು ಸೇವೆಗಳನ್ನು ಗುಣಮಟ್ಟಕ್ಕೆ ನಿಗದಿಪಡಿಸಬೇಕೆಂದು ಅವುಗಳನ್ನು ಕಾನೂನಿನ ಅನ್ವಯ ನಿಯಂತ್ರಣವನ್ನು ಮಾಡಲು ಕರ್ನಾಟಕ ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ಅಧಿನಿಯಮ 2007 ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಸದರಿ ಅಧಿನಿಯಮದ ಸೆಕ್ಷನ್ 3ರ ಪ್ರಕಾರ ರಾಜ್ಯದಲ್ಲಿ ಹೊಸದಾಗಿ ಸ್ಥಾಪನೆಯಾಗಿರುವ ಖಾಸಗಿ ವೈದ್ಯಕೀಯ ಸಮಸ್ಯೆಗಳು ಈಗಾಗಲೇ ಅಸ್ತಿತ್ವದಲ್ಲಿರುವ ಕಾರಣ ಖಾಸಗಿ ವೈದ್ಯಕೀಯ ಸಮಸ್ಯೆಗಳನ್ನು ನೋಂದಾವಣೆ ಮಾಡಿಕೊಳ್ಳಬೇಕು. ಈ ರೀತಿಯಲ್ಲಿ ನೋಂದಾವಣೆ ಮಾಡಿಕೊಂಡಿರುವ ಇಂತಿಷ್ಟು ಸೌಲಭ್ಯಗಳು ಇರಬೇಕೆಂದು ನಿಯಮಗಳನ್ನು ನಿಗದಿಪಡಿಸಲಾಗಿತ್ತು. ಸದರಿ ಕರ್ನಾಟಕ ಖಾಸಗಿ ವೈದ್ಯಕೀಯ ಸಮಸ್ಯೆಗಳ

ನಿಯಮಗಳ 2009 ಸೆಕ್ಷನ್ 1 ಮತ್ತು 3ರ ಅನ್ವಯ ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಸಮಸ್ಯೆಗಳನ್ನು ನೋಂದಾವಣೆ ಮಾಡಿಕೊಳ್ಳುವ ಆಯಾಯ ಸ್ಥಳದಲ್ಲಿ ಪುರುಷರು ಮತ್ತು ಮಹಿಳೆಯರು ಪ್ರತ್ಯೇಕವಾಗಿ ಶೌಚಾಲಯಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಶೌಚಾಲಯಗಳನ್ನು ಒದಗಿಸಬೇಕೆಂದು ಕಡ್ಡಾಯಗೊಳಿಸಿದೆ. ನಿಯಮಗಳು ನಿಗದಿಪಡಿಸುವಂಥ ಸಮಸ್ಯೆಗಳನ್ನು ಮಹಿಳೆಯರು ಮತ್ತು ಪುರುಷರು ಪ್ರತ್ಯೇಕ ಶೌಚಾಲಯವನ್ನು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಬೇಕು ಎಂದು ಕಡ್ಡಾಯವಾಗಿರುವ ಕಾರಣ ಅದಕ್ಕೆ ವಿರುದ್ಧವಾಗಿ ನಿಯಮಗಳನ್ನು ಸರ್ಕಾರ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇವತ್ತೇನು ಮಲ್ಲಿಕಾ ಪ್ರಸಾದ್‌ರವರು ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ನಿಜವಾಗಿಯೂ ಅಲ್ಲಿ ಸಮಸ್ಯೆ ಇದೆ, ಎರಡು ಸಣ್ಣ ಸಣ್ಣ ಕ್ಲಿನಿಕ್‌ಗಳನ್ನು ಇಟ್ಟುಕೊಂಡು ಅವರು ಪ್ರಾಕ್ಟೀಸ್ ಮಾಡುತ್ತಿದ್ದಾರೆ, ಆದರೆ ಕಾನೂನು ಪ್ರಕಾರ ನಾವು ಮಾಡಿದ್ದೇವೆಂದು ಇವತ್ತು ಆರೋಗ್ಯ ಸಚಿವರು ಹೇಳುತ್ತಿದ್ದಾರೆ. ಆದರೆ ಕಾನೂನಿನಂತೆ ನೀವು ಮಾಡಿ, ಆದರೆ ಅವರಿಗೆ ಒಂದು time bound ಎಂದು ಮಾಡಿ ಒಂದು ವರ್ಷದೊಳಗೆ ಆ ಕ್ಲಿನಿಕ್‌ನಲ್ಲಿ ನೀವು ಮಾಡಿಕೊಳ್ಳಬೇಕು. ಅದರ ನಂತರ ನಾವು cancel ಮಾಡುತ್ತೇವೆಂಬ ಕಾನೂನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

SRI D.K. SHIVAKUMAR: Two Ministers are arguing for the same thing. ಅವರೊಂದು ಹೇಳುತ್ತಿದ್ದಾರೆ, ಇವರೊಂದು ಹೇಳುತ್ತಿದ್ದಾರೆ. Let the Government have one stand. There are two stands here.

ಅಧ್ಯಕ್ಷರು: ಅವರೇನು ವಿರೋಧವಾದ stand ಹೇಳಿಲ್ಲ. ಅವರು ಸುಮ್ಮನೆ ಸಲಹೆಯನ್ನು ಕೊಟ್ಟಿದ್ದಾರೆ ಅಷ್ಟೇ.

Sri D.K. Shivakumar: She is a minister.

ಶ್ರೀ ಸಿದ್ದರಾಮಯ್ಯ: Council of Ministers ಅಂದರೆ collective responsibility ಇಲ್ಲವೇ?

ಅಧ್ಯಕ್ಷರು: ಇದೆ, ಅವರು ಸಲಹೆ ಕೊಟ್ಟಿದ್ದಾರೆ ಅಷ್ಟೇ. ಇದರ ಬಗ್ಗೆ ಮತ್ತೆ ಚರ್ಚೆ ಬೇಡ.

ಶ್ರೀ ಅಭಯಚಂದ್ರ ಜೈನ್: ಅಲ್ಲಿ ಕ್ಲಿನಿಕ್ ಇದ್ದರೆ ಒಂದು waiting room, ಒಂದು ಕೋಣೆ ಅಷ್ಟೇ ಇರುತ್ತದೆ. ಅಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡುವುದು ಬಹಳ ಕಷ್ಟ. ಬಾಡಿಗೆ ಕೊಠಡಿಗಳನ್ನು ತೆಗೆದುಕೊಂಡು ಇವತ್ತು ಕ್ಲಿನಿಕ್ ಅನ್ನು ಅವರು ನಡೆಸುವುದರಿಂದಾಗಿ ಇಲ್ಲಿ ಕಡ್ಡಾಯವಾಗಿ ಶೌಚಾಲಯಗಳನ್ನು ಮಾಡುವುದು ಕಷ್ಟವಿದೆ. ಆದ್ದರಿಂದ ಸ್ವಲ್ಪ relaxation ಕೊಡಬೇಕೆಂದು ನಮ್ಮ ಕಳಕಳಿಯ ವಿನಂತಿ.

ಅಧ್ಯಕ್ಷರು: ಅಭಯಚಂದ್ರರವರೇ, ನಿಮ್ಮದೇ ಶೂನ್ಯವೇಳೆ ಪ್ರಸ್ತಾಪ ಮಾಡಿ. ಯು.ಟಿ. ಖಾದರ್ ಕುಳಿತುಕೊಳ್ಳಿ.

ಶ್ರೀ ಯು.ಟಿ. ಖಾದರ್: ನಾವಿಬ್ಬರೂ ಜೊತೆಯಲ್ಲಿ ಹಾಕಿದ್ದೇವೆ ಅಧ್ಯಕ್ಷರೆ.

(ಆ) ವಿಷಯ: **ONGC ಸಂಸ್ಥೆಯಿಂದ ಮಂಗಳೂರಿನ ಸಂಬಂಧಪಟ್ಟ ಜನರಿಗೆ ಉದ್ಯೋಗಾವಕಾಶ ಅಥವಾ ಆರ್ಥಿಕ ನೆರವು ನೀಡುವ ಬಗ್ಗೆ.**

ಶ್ರೀ ಯು.ಟಿ. ಖಾದರ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ONGC ಸಂಸ್ಥೆಗೆ ಬಹುಶಃ 2315 ಎಕರೆಯಷ್ಟು ಜನ ಸಾಮಾನ್ಯರ ಜಮೀನನ್ನು ಸರ್ಕಾರ ಸ್ವಾಧೀನಪಡಿಸಿಕೊಂಡು ಕೊಟ್ಟಿದೆ. ಅಲ್ಲಿ ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಅವರು ಅಲ್ಲಿ ಹೇಳಿದ್ದಾರೆ, ಯಾರು ಜಾಗವನ್ನು ಕಳೆದುಕೊಳ್ಳುತ್ತಾರೋ ಆ ನಿರಾಶ್ರಿತರಿಗೆ ಅವರ ಮನೆಯವರಿಗೆ ಉದ್ಯೋಗವನ್ನು ಕೊಡುವುದಾಗಿ ಹೇಳಿದ್ದಾರೆ. ಬಹುಶಃ ಬೇರೆ ಬೇರೆ ಕಡೆ